ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಅಧೀಕ್ಷಕಅಭಿಯಂತರರು(ವಿ)
ಕಾರ್ಯ ಮತ್ತು ಪಾಲನಾ ವೃತ್ತ, ನವನಗರ, ಬಾಗಲಕೋಟ-02
Tel: 08354/297330, Mob No- 9449877676

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele.)
O&M Circle, Navanagar, Bagalkot-02
E-mail ID: seebgkt.hescom@gmail.com
dcabgkt.hescom@gmail.com

Corporate Identity Number(CIN): U31401KA2002SGC030437

ಕ್ರ.ಸಂ:ಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2023-24/ 7977-7981 ದಿನಾಂಕ: 25 JAN 2024

ದಿನಾಂಕ: 27-12-2023 ರಂದು ಬೆಳಿಗ್ಗೆ 11:00 ಘಂಟೆಗೆ ಶ್ರೀ ಸಿದ್ದಪ್ಪ ಬಿಂಜಗೇರಿ, ಅಧೀಕ್ಷಕ ಅಭಿಯಂತರರು(ವಿ), ವಿಜಯಪುರ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ, ಕಾ ಮತ್ತು ಪಾ ವೃತ್ತ, ಹೆಸ್ಕಾಂ ಬಾಗಲಕೋಟ ರವರ ಅಧ್ಯಕ್ಷತೆಯಲ್ಲಿ ಜರುಗಿದ ಬಾಗಲಕೋಟ ಜಿಲ್ಲೆಯ ವಿದ್ಯುತ್ ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಯ ಸಭೆಯ ನಡಾವಳಿಗಳು.

ವಿಷಯ: ಸ್ಥಾವರ ಸಂಖ್ಯೆ: ILKHT-181 ರ ಅಧಿಕ ಭದ್ರತಾ ಠೇವಣಿ ಮರಳಿಸುವ ಕುರಿತು.

**<u>ಪ್ರಕರಣ ಸಂಖ್ಯೆ: 06/2023</u>**

M/s Padam Granites, ಬಲಕುಂದಿ ಗ್ರಾಮ,
ತಾಲೂಕ: ಇಲಕಲ್ಲ ರವರ ಪ್ರತಿನಿಧಿ
ಶ್ರೀ ತುಶಾರ್. ಎಮ್.ಬಡ್ಡಿ ಅರಿಹಂತ ಪಾರ್ಕ್,
ಕೇಶ್ವಾಪುರ, ಹುಬ್ಬಳ್ಳಿ. } -----ದೂರುದಾರರು.

ವಿರುದ್ಧ

ಸಹಾಯಕಕಾರ್ಯನಿರ್ವಾಹಕಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಹುವಿಸಕಂನಿ.,
ಇಲಕಲ್ಲ. } -----ಪ್ರತಿವಾದಿ.

ಹಾಜರಿದ್ದವರು: 1) ಶ್ರೀ ಖಲೀಂ ಅಹಮ್ಮದ್, ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟ.
2) ಸಹಾಯಕಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಇಲಕಲ್ಲ.
3) ಪ್ರಭಾರ ಸಹಾಯಕ ಲೆಕ್ಕಾಧಿಕಾರಿ ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಇಲಕಲ್ಲ.

ಗೈರು ಹಾಜರು: 4) M/s Padam Granites, ಬಲಕುಂದಿ ಗ್ರಾಮ, ತಾಲೂಕ: ಇಲಕಲ್ಲ ರವರ ಪ್ರತಿನಿಧಿ ಶ್ರೀ ತುಶಾರ್ ಎಮ್.ಬಡ್ಡಿ, ಅರಿಹಂತ ಪಾರ್ಕ್, ಕೇಶ್ವಾಪುರ, ಹುಬ್ಬಳ್ಳಿ.

ಪು.ತಿ.ನೋ.

ಪ್ರಕರಣ ಸಂಖ್ಯೆ: 06/2023 ಕ್ಕೆ ಸಂಬಂಧಿಸಿದಂತೆ, ದಿನಾಂಕ: 27-12-2023 ರಂದು **ಬೆಳಿಗ್ಗೆ 11:00 ಘಂಟೆಗೆ ಶ್ರೀ ಸಿದ್ದಪ್ಪ. ಬಿಂಜಗೇರಿ,** ಅಧೀಕ್ಷಕ ಅಭಿಯಂತರರು(ವಿ), ವಿಜಯಪುರ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಕಾ ಮತ್ತು ಪಾ ವೃತ್ತ, ಹೆಸ್ಕಾಂ ಬಾಗಲಕೋಟರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರನ್ನು/ಅಧಿಕಾರಿಗಳನ್ನು/ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ ಇಲಕಲ್ಲ ರವರ ಲಿಖಿತ ಹೇಳಿಕೆ ಪತ್ರ ಸಂಖ್ಯೆ: 2102-03 ದಿನಾಂಕ: 14-09-2023 ಕಾರ್ಯ ಪಾಲನಾ ಉಪ ವಿಭಾಗ ಹುವಿಸಕಂನಿ., ಇಲಕಲ್ಲ ವ್ಯಾಪ್ತಿಯ ಗ್ರಾಹಕರಾದ ಶ್ರೀ ಗೋಪಾಲ ರೂಪಚಂದ ಬಾನಗಡ, M/s Padam Granites, ಸಾ|| ಬಲಕುಂದಿ ರವರ ಸ್ಥಾವರ ಸಂಖ್ಯೆ: ILKHT-181 ಕ್ಕೆ ವಿದ್ಯುತ್ ಕಡಿಮೆ ಭಾರ ಅಳವಡಿಸಿಕೊಳ್ಳದೇ ಇರುವ ಕುರಿತು ಗ್ರಾಹಕರ ಕುಂದು ಕೊರತೆಯ ಅರ್ಜಿಯಲ್ಲಿ ತಿಳಿಸಿರುವ ಅಂಶಗಳಿಗೆ ಈ ಕೆಳಗಿನಂತೆ ವಿವರಿಸಲಾಗಿದೆ.**

1. ಸ್ಥಾವರ ಸಂಖ್ಯೆ: **ILKHT-181** ಗ್ರಾಹಕರು ದಿನಾಂಕ: 20-12-2022 ರಂದು ಇಲಕಲ್ಲ ಉಪ ವಿಭಾಗ ಕಛೇರಿಯ ಆರ್.ಎ.ಪಿ.ಡಿ.ಆರ್.ಪಿ ತಂತ್ರಾಂಶದಲ್ಲಿ ವಿದ್ಯುತ್ ಭಾರ 100 ಕೆ.ವ್ಹಿ.ಎ ದಿಂದ 80 ಕೆ.ವ್ಹಿ.ಎ ಕಡಿಮೆಗೊಳಿಸಲು ಗ್ರಾಹಕರು ಮೂಲಕ ಅರ್ಜಿ ನೋಂದಣಿ ಮಾಡಿರುತ್ತಾರೆ.
2. ಅರ್ಜಿ ನೋಂದಣಿ ಮಾಡಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ (ವಿದ್ಯುತ್ ಭಾರ ಪ್ರಕ್ರಿಯೆ) ಆರ್.ಎ.ಪಿ.ಡಿ.ಆರ್.ಪಿ ತಂತ್ರಾಂಶದಲ್ಲಿ ಪೂರ್ಣಗೊಳಿಸಬೇಕಾಗಿರುತ್ತದೆ.
3. ಈ ಮೇಲಿನ ಅಂಶಗಳಿಂದ ಆರ್.ಎ.ಪಿ.ಡಿ.ಆರ್.ಪಿ ತಂತ್ರಾಂಶದಲ್ಲಿ ಅರ್ಜಿ ನೋಂದಣಿ ಮಾಡಿದ ದಿನಾಂಕದಿಂದ ವಿದ್ಯುತ್ ಭಾರ ಕಡಿಮೆ ಮಾಡುವ ಪ್ರಕರಣವು ನಿಗದಿತ ದಿನಾಂಕದೊಳಗಾಗಿ ಮುಕ್ತಾಯಗೊಳ್ಳಬೇಕು. ಇಲ್ಲವಾದಲ್ಲಿ ಆರ್.ಎ.ಪಿ.ಡಿ.ಆರ್.ಪಿ ತಂತ್ರಾಂಶದಲ್ಲಿ ವಿದ್ಯುತ್ ಭಾರ ಕಡಿಮೆ ಮಾಡುವ ಪ್ರಕರಣವು ತನ್ನಿಂದ ತಾನೇ **(Auto Close)** ಮುಕ್ತಾಯಗೊಳ್ಳುತ್ತದೆ. ಸದರಿ ಪ್ರಕರಣವು ದಿನಾಂಕ: 20-01-2023 ರಂದು ಮುಕ್ತಾಯಗೊಂಡಿರುತ್ತದೆ. **Screen Shot** ಲಗತ್ತಿಸಲಾಗಿರುತ್ತದೆ.
4. ಆದಾಗ್ಯೂ ಸದರಿ ಪ್ರಕರಣದ ಕಡತವು ಮ್ಯಾನುವಲ್ ಪ್ರಕ್ರಿಯೆಯಲ್ಲಿ ಮಾಡಿರುವುದು ಕಂಡು ಬಂದಿರುತ್ತದೆ. ಸದರಿ ಪ್ರಕರಣದ ಕಡತವು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರದ ಕಾರಣ ವಿದ್ಯುತ್ ಭಾರದ ಪ್ರಕರಣವು ಆರ್.ಎ.ಪಿ.ಡಿ.ಆರ್.ಪಿ ತಂತ್ರಾಂಶದಲ್ಲಿ ವಿದ್ಯುತ್ ಭಾರ ಕಡಿಮೆ ಆಗಿರುವುದಿಲ್ಲ ಎಂದು ತಿಳಿಸಿರುವರು.

ಕಾರಣ M/s Padam Granites, ಬಲಕುಂದಿ ಗ್ರಾಮ, ತಾಲೂಕ: ಇಲಕಲ್ಲ ರವರ ಪ್ರತಿನಿಧಿ ಶ್ರೀ ತುಶಾರ್ ಎಮ್. ಬಡ್ಡಿ, ಅರಿಹಂತ ಪಾರ್ಕ್, ಕೇಶ್ವಾಪುರ, ಹುಬ್ಬಳ್ಳಿ ಇವರು ಗೈರು ಹಾಜರಾಗಿರುವ ಪ್ರಯುಕ್ತ ಸಭೆಯಲ್ಲಿ ಪ್ರಕರಣದ ಪರ ಮತ್ತು ವಿರೋಧ ಮಾಹಿತಿಯನ್ನು ಚರ್ಚಿಸಲಾಗಲಿಲ್ಲ ಕಾರಣ ಸದರಿ ಪ್ರಕರಣ ಮುಂದೂಡಲಾಯಿತು. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ ಇಲಕಲ್ಲ ರವರಿಗೆ ಮುಂದಿನ ದಿನಾಂಕದಂದು ಮಾಹಿತಿಯನ್ನು ಮಂಡಿಸಲು ಸೂಚಿಸಲಾಯಿತು.

ಶ್ರೀ [illegible]
ಕಾರ್ಯನಿರ್ವಾಹಕ ಇಂಜನೀಯರ(ವಿ),
ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ
ಹಾಗೂ ಗ್ರಾ.ಕುಂ.ಕೊ.ನಿ.,ವೇದಿಕೆ, ಬಾಗಲಕೋಟೆ.

24.1.24

ಅಧ್ಯಕ್ಷರು,
(ಶ್ರೀ, ಸಿದ್ದಪ್ಪ. ಬಿಂಜಗೇರಿ,)
ಅಧೀಕ್ಷಕ ಅಭಿಯಂತರರು(ವಿ) ವಿಜಯಪುರ ಹಾಗೂ,
ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ
ಕಾ ಮತ್ತು ಪಾ ವೃತ್ತ ಹುವಿಸಕಂನಿ.,ಬಾಗಲಕೋಟೆ.

**ಪ್ರತಿಯನ್ನು ಮಾನ್ಯರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ:**

ಮುಖ್ಯ ಇಂಜಿನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ.

<u>ಪ್ರತಿ ಅಭಿವಂದನೆಗಳೊಂದಿಗೆ:</u>

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.

<u>ಪ್ರತಿ ಮಾಹಿತಿಗಾಗಿ:</u>

1) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ.
2) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಇಲಕಲ್ಲ.
3) M/s Padam Granites, ಬಲಕುಂದಿ ಗ್ರಾಮ, ತಾಲೂಕ: ಇಲಕಲ್ಲ ರವರ ಪ್ರತಿನಿಧಿ ಶ್ರೀ ತುಶಾರ್ ಎಮ್. ಬಡ್ಡಿ, ಅರಿಹಂತ ಪಾರ್ಕ್, ಕೇಶ್ವಾಪುರ, ಹುಬ್ಬಳ್ಳಿ

ಕಛೇರಿ ಪ್ರತಿ/ಪ್ರಧಾನಕಡತ.